ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	53 (27)
ಸದಸ್ಯರ ಹೆಸರು	ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ)
ಉತ್ತರಿಸುವ ದಿನಾಂಕ	13-12-2021
ಉತ್ತರಿಸುವ ಸಚಿವರು	ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಕೌಶಲ್ಯಾಭಿವೃದ್ಧಿ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿರುವ ಸರ್ಕಾರಿ ಹಾಗೂ ಅನುದಾನಿತ ಪದವಿ ಹಾಗೂ ಇಂಜಿನಿಯರಿಂಗ್ ಕಾಲೇಜುಗಳು ಬೋಧಕರಿಗೆ ಯು.ಜಿ.ಸಿ/ ಎ.ಐ.ಸಿ.ಟಿ.ಇ. 6ನೇ ಹಾಗೂ 7ನೇ ವೇತನ ಆಯೋಗದ ಪ್ರಕಾರ ವೇತನ ಬಾಕಿಯನ್ನು ಉಳಿಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು
ಆ)	ಹಾಗಿದ್ದಲ್ಲಿ, ಎಷ್ಟು ಮೊತ್ತದ ಬಾಕಿಯನ್ನು ಯಾವ ಸಮಯದಿಂದ ನೀಡಬೇಕಾಗಿದೆ; (ಪೂರ್ಣ ವಿವರ ನೀಡುವುದು)	1) ರಾಜ್ಯದಲ್ಲಿರುವ ಸರ್ಕಾರಿ ಹಾಗೂ ಅನುದಾನಿತ ಪದವಿ ಕಾಲೇಜುಗಳ ಬೋಧಕರಿಗೆ ಯುಜಿಸಿ 6ನೇ ವೇತನ ಆಯೋಗದ ಪ್ರಕಾರ ದಿನಾಂಕ 01.01.2006 ರಿಂದ 23.12.2009ರ ಅವಧಿಗೆ ಮತ್ತು 7ನೇ ವೇತನ ಆಯೋಗದ ಪ್ರಕಾರ ದಿನಾಂಕ 01.01.2016 ರಿಂದ 31.03.2019ರ ಅವಧಿಗೆ ಹಿಂಬಾಕಿ ಪಾವತಿಸಲು ಅನುದಾನ ಬಿಡುಗಡೆ ಮಾಡಲಾಗಿದೆ. ಕೇಂದ್ರದ ಪಾಲಿನ ಶೇ.50ರಷ್ಟು ಅನುದಾನ ರೂ.689.35 ಕೋಟಿಗಳನ್ನು ಬಿಡುಗಡೆ ಮಾಡಲು ದಿನಾಂಕ: 20/05/2019, 01/07/2019 ಮತ್ತು 17/08/2021ರಂದು ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯಲಾಗಿರುತ್ತದೆ. 2) 10 ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳ ಬೋಧಕ ಸಿಬ್ಬಂದಿಗಳಿಗೆ 6ನೇ ಎ.ಐ.ಸಿ.ಟಿ.ಇ. ವೇತನ ಆಯೋಗದ ಶಿಫಾರಸ್ಸಿನ ಮೇರೆಗೆ ದಿನಾಂಕ: 01/01/2006 ರಿಂದ 31/03/2010ರ ವರೆಗೆ ಎ.ಐ.ಸಿ.ಟಿ.ಇ., ವೇತನ ಬಾಕಿ ಸಂಬಂಧ, ಇದುವರೆವಿಗೂ ರೂ.4680.55ಲಕ್ಷಗಳನ್ನು ಬಿಡುಗಡೆ ಮಾಡಿದೆ. ಇನ್ನುಳಿದ ರೂ.2167.04ಲಕ್ಷಗಳನ್ನು ಬಿಡುಗಡೆ ಮಾಡುವ ಸಂಬಂಧ ದಿನಾಂಕ: 02/09/2020ರಂದು ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ರವರು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಇದಕ್ಕೆ ಸಂಬಂಧಿಸಿದಂತೆ ದಿನಾಂಕ: 26/09/2020 ಮತ್ತು ದಿನಾಂಕ: 12/11/2021ರಂದು ಪತ್ರ ಸಂಖ್ಯೆ: ಇಡಿ 92 ಹೆಚ್ ಪಿಟಿ 2020ರಲ್ಲಿ ಕೆಲವು ಸ್ಪಷ್ಟನೆಗಳನ್ನು ಕೋರಿದ್ದು, ಸದರಿಯವರಿಂದ ಮಾಹಿತಿ ಸ್ವೀಕೃತವಾದ ನಂತರ ನಿಯಮಾನುಸಾರ ಮುಂದಿನ ಕ್ರಮ ಜರುಗಿಸಲಾಗುವುದು. ದಿನಾಂಕ: 24/03/2020ರ ನಂತರದ 7ನೇ ಎ.ಐ.ಸಿ.ಟಿ.ಇ., ಬಾಕಿ ವೇತನವನ್ನು ಪಾವತಿಸಲಾಗಿದೆ. ಅಲ್ಲದೆ, ದಿನಾಂಕ: 01/01/2016 ರಿಂದ
(ಇ)	ಈ ಸಂಬಂಧ ಯು.ಜಿ.ಸಿ/ ಎ.ಐ.ಸಿ.ಟಿ.ಇ./ಎಂ.ಹೆಚ್.ಆರ್.ಡಿ.ಯಿಂದ ಇದುವರೆವಿಗೆ ರಾಜ್ಯಕ್ಕೆ ಬಂದಿರುವ ಅನುದಾನದ ಮೊತ್ತವೆಷ್ಟು;	
ಈ)	ಇದುವರೆವಿಗೂ ಸದರಿ ಬಾಕಿಯನ್ನು ಪಾವತಿಸದಿರಲು ಕಾರಣಗಳೇನು;	

		31/03/2019ರ ವರೆಗಿನ ಬಾಕಿ ವೇತನವನ್ನು ಪಾವತಿಸುವ ಸಂಬಂಧ ಕೇಂದ್ರ ಸರ್ಕಾರದ ಪಾಲಿನ ಸಹಾಯಾನುದಾನ ರೂ.73.82ಕೋಟಿಗಳನ್ನು ಬಿಡುಗಡೆ ಮಾಡಲು ಕೇಂದ್ರ ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯದ ಕಾರ್ಯದರ್ಶಿಯವರಿಗೆ ದಿನಾಂಕ: 09/06/2020ರಂದು ಅಪರ ಮುಖ್ಯ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ ರವರ ಹೆಸರಿನಲ್ಲಿ ಅಗತ್ಯ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು. ಅಲ್ಲದೆ, ದಿನಾಂಕ: 22/12/2020ರಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ ಇವರು ಕೇಂದ್ರ ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯದ ಕಾರ್ಯದರ್ಶಿಯವರಿಗೆ ಕೇಂದ್ರದ ಪಾಲಿನ ಸಹಾಯಾನುದಾನ ರೂ.73.82 ಕೋಟಿಗಳನ್ನು ಬಿಡುಗಡೆ ಮಾಡಲು ಕೋರಲಾಗಿತ್ತು. ಮಾನ್ಯ ಉಪ ಮುಖ್ಯಮಂತ್ರಿಗಳು, ಉನ್ನತ ಶಿಕ್ಷಣ ಇಲಾಖೆ ಇವರು ದಿನಾಂಕ: 14/09/2020 ಮತ್ತು 26/02/2021ರ ಅರೆ ಸರ್ಕಾರಿ ಪತ್ರಗಳಲ್ಲಿ ಕೇಂದ್ರದ ಪಾಲಿನ ಸಹಾಯಾನುದಾನವನ್ನು ಬಿಡುಗಡೆ ಮಾಡಲು ಮಾನ್ಯ ಕೇಂದ್ರ ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯದ ಸಚಿವರನ್ನು ಸಹ ಕೋರಲಾಗಿರುತ್ತದೆ. ಭಾರತ ಸರ್ಕಾರದ ಶಿಕ್ಷಣ ಮಂತ್ರಾಲಯದ ಪತ್ರ ದಿನಾಂಕ: 22/07/2021ರ ಪತ್ರದಲ್ಲಿ 7ನೇ ಪರಿಷ್ಕೃತ ಎ.ಐ.ಸಿ.ಟಿ.ಇ., ವೇತನವನ್ನು ಅನುಷ್ಠಾನಗೊಳಿಸಿ, ಕೇಂದ್ರ ಸರ್ಕಾರದ ಶೇ.50ರಷ್ಟು ಸಹಾಯಾನುದಾನವನ್ನು ಕೋರಲು ನಿಗದಿಪಡಿಸಿರುವ ನಮೂನೆಯನ್ನು ಲಗತ್ತಿಸಿ, ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಕುಲಸಚಿವರು, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ ಮತ್ತು ಕುಲಸಚಿವರು, ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ, ಬೆಂಗಳೂರು ಇವರಿಗೆ ಪತ್ರವನ್ನು ದಿನಾಂಕ: 09/08/2021ರಂದು ಹೊರಡಿಸಿದ್ದು, ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದಿಂದ ಮಾಹಿತಿಯನ್ನು ನಿರೀಕ್ಷಿಸಲಾಗಿದ್ದು ನಿಯಮಾನುಸಾರ ಕೇಂದ್ರದ ಪಾಲಿನ ಸಹಾಯಾನುದಾನ ಪಡೆಯಲು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗುವುದು.
ಉ)	ಯಾವ ಕಾಲಮಿತಿಯಲ್ಲಿ ಸದರಿ ವೇತನ ಬಾಕಿಯನ್ನು ಪಾವತಿಸಲಾಗುವುದು.	ಕೇಂದ್ರ ಸರ್ಕಾರದ ಪಾಲಿನ ಅನುದಾನವನ್ನು ಬಿಡುಗಡೆ ಮಾಡಿದ ನಂತರ ಹಾಗೂ ರಾಜ್ಯ ಸರ್ಕಾರದ ಅನುದಾನ ಲಭ್ಯತೆಗನುಗುಣವಾಗಿ ಸದರಿ ವೇತನ ಬಾಕಿಯನ್ನು ಪಾವತಿಸಲಾಗುವುದು.

ಸಂಖ್ಯೆ: ಇಡಿ 207 ಹೆಚ್‌ಪಿಸಿ 2021)

(ಡಾ: ಅಶ್ವಥ ನಾರಾಯಣ ಸಿ.ಎನ್)
ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ
ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು
ತಂತ್ರಜ್ಞಾನ ಹಾಗೂ ಕೌಶಲ್ಯಾಭಿವೃದ್ಧಿ ಸಚಿವರು.